ಜನಸಂಖ್ಯೆ ಇತ್ಯಾದಿ ಸುದ್ದಿಯೆಲ್ಲ ಮುಗಿದಮೇಲೆ; ಹೇಳಲೋ ಬೇಡವೋ ಎಂದು ಮುಜುಗರಗೊಳ್ಳುತ್ತಲೇ, ಕಸಬಾಕ್ಕೆ ಬಂದಮೇಲೆ ಕಂಡುಬಂದ ತನ್ನ ಋತುಚಕ್ರ ಸಂಬಂಧಿ ಸಮಸ್ಯೆಯೊಂದನ್ನು ಹೇಳಿಕೊಂಡಳು. ಆ ವಿಷಯದ ಕುರಿತೇ ಅಮ್ಮ ಮಗಳ ನಡುವೆ ಚರ್ಚೆ ನಡೆಯುತ್ತಿರುವ ನಡುವೆ

ಯಾವುದೋ ಗಂಡಸಿನ ಅಪರಿಚಿತ ಧ್ವನಿಯೊಂದು, "ಅಭೀ ಏಕ್ ಮಿನಿಟ್ ಬಾಕೀ ಹೈ, ಜಲ್ದೀ ಖತಮ್ ಕರೋ" ಎಂದು ವರಟಾಗಿ ನುಡಿಯಿತು. ಅನಿರೀಕ್ಷಿತವಾಗಿ ಫೋನಿನಲ್ಲಿ ತೂರಿ ಬಂದ ಈ ಧ್ವನಿಗೆ ಚೇತನಾ ತಲ್ಲಣಿಸಿ ಹೋದಳು. ಆ ಧ್ವನಿ ಅಮ್ಮನಿಗೆ ಕೇಳಿತ್ತೋ ಇಲ್ಲವೋ, ಅತ್ತಕಡೆಯಿಂದ ಅಮ್ಮ 'ಹಲೋ ಹಲೋ...' ಎನ್ನುತ್ತಿದ್ದರೂ ಮಾತನಾಡದ ಚೇತನಾ ಹಾಗೇ ಫೋನ್ ಕಟ್ ಮಾಡಿ ಕುಳಿತುಬಿಟ್ಟಳು.

'ನಡುವೆ ಮಾತನಾಡಿದ್ದು ಯಾರು?... ಹಾಗಾದರೆ, ನಾನು ಮಾತನಾಡಿದ್ದನ್ನೆಲ್ಲಾ ಯಾರೋ ಇಷ್ಟು ಹೊತ್ತು ಕೇಳಿಸಿ ಕೊಳ್ಳುತ್ತಿದ್ದರೇ?...' ಗಂಡನಲ್ಲೂ ಇದುವರೆಗೆ ಹೇಳಿರದ ಅತೀ ವೈಯಕ್ತಿಕ ಸಂಗತಿಯನ್ನು ಯಾವುದೋ ಅಪರಿಚಿತ ಗಂಡಸಿನ ಕಿವಿಯಲ್ಲಿ ಉರುಹಿದನೇ ನಾನು?' ಎಂಬ ಆಲೋಚನೆಗೇ ಆಕೆಗೆ ಮೈಮೇಲೆಲ್ಲಾ ಎರೆಹುಳ ಹರಿದಂತೆ ಹೇಸಿಗೆಯಾಯಿತು. ಬೆಳಿಗ್ಗೆ ಸ್ನಾನವಾಗಿದ್ದರೂ ಮತ್ತೆ ಹೋಗಿ ಸ್ನಾನ ಮಾಡಿ ಬಂದಳು.

ಸಂಜೆ ಚಂದ್ರಕಾಂತ ಮನೆಗೆ ಬಂದೊಡನೆ, ಈ ಅಪರಿಚಿತ ಧ್ವನಿಯಬಗ್ಗೆ ಪ್ರಸ್ತಾಪಿಸಿದಳು. ಆಕೆಯ ಆತಂಕಕ್ಕೆ ಚಂದ್ರಕಾಂತ ನಕ್ಕುಬಿಟ್ಟ. "ಈ ಹುಂಡಿ ಕರೆ ಎನ್ನುವುದೇ ಒಂದು ಮಾಫಿಯಾ. ಭಾರತದ ಯಾವುದೋ ಮೂಲೆಯಲ್ಲಿ ಕುಳಿತಿರುವ ಟೆಲಿಕಾಮ್ ಡಿಪಾರ್ಟ್‌ಮೆಂಟಿಗೆ ಸಂಬಂಧಿಸಿದ ಒಬ್ಬ ವ್ಯಕ್ತಿ, ಯಾವುದೋ ಒಂದು ಲೈನಿನ ಮುಖಾಂತರ ನಮಗೆ ಫೋನ್ ಮಾಡಿ ಅದನ್ನು ನಾವು ಕೊಟ್ಟ ನಂಬರಿಗೆ ಕನೆಕ್ಟ್ ಮಾಡುತ್ತಾನೆ. ಅಂತರ ಅದರ ಬಿಲ್ಲನ್ನು ಮತ್ಯಾರೋ ಲೆಕ್ಕಕ್ಕೆ ಸಿಗದ ಖಾತೆಗೆ ವರ್ಗಾಯಿಸಿಬಿಡುತ್ತಾನೆ. ಅನೇಕ ದೊಡ್ಡ ವ್ಯಕ್ತಿಗಳ ಕೈವಾಡವಿರುವ ಗೋಲ್‌ಮಾಲ್ ದಂಧೆ ಅದು. ನಮಗೆ ಮಾತಾಡಲು ಸಮಯ ಮಿತಿ ಇರುವುದರಿಂದ, ಒಂಬತ್ತು ನಿಮಿಷವಾಗುತ್ತಲೇ ಇನ್ನೊಂದೇ ನಿಮಿಷವಿರುವುದು ಎಂದು ಸೂಚಿಸುತ್ತಾನೆ ಅಷ್ಟೇ" ಎಂಬುದನ್ನು ವಿವರಿಸಿದ.

"ಆತ ಯಾರೋ, ಯಾವ ಭಾಷೆಯವನೋ, ಎಲ್ಲೋ ಕುಳಿತು ದಿನಕ್ಕೆ ಸಾವಿರಾರು ಕಾಲ್‌ಗಳನ್ನು ಕನಕ್ಟ್ ಮಾಡುತ್ತಿರುತ್ತಾನೆ. ನಮ್ಮ ಮಾತಿನ ಬಗ್ಗೆ ಆತನಿಗೆ ಕಿಂಚಿತ್ ಗಮನವೂ ಇರಲಿಕ್ಕಿಲ್ಲ. ಒಂದು ವೇಳೇ ಕೇಳಿಸಿಯೇ ಕೊಂಡ ಅಂತಿಟ್ಟುಕೋ, ನಮಗೇನು?" ಎನ್ನುತ್ತ ಸಮಾಧಾನ ಪಡಿಸಿದ. "ಒಂದಕ್ಕೆ ಹತ್ತರಷ್ಟು ಕಡಿಮೆ ಬೆಲೆ. ಮಾತನಾಡಲು ಕಂಜೂಸಿ ಮಾಡಬೇಕೆಂದಿಲ್ಲ. ಅದಕ್ಕೆಲ್ಲಾ ತಲೆ ಕೆಡಿಸಿಕೊಳ್ಳದೆ, ಧಾರಾಳವಾಗಿ ಫೋನ್ ಮಾಡು" ಎಂದು, ಇದೊಂದು ದೊಡ್ಡ ವಿಷಯವೇ ಅಲ್ಲ ಎಂಬಂತೆ ತಳ್ಳಿಹಾಕಿದ.

ಆ ಯಾವುದೋ ಭಾಷೆಯವನು ಕನ್ನಡದವನೇ ಯಾಕಾಗಿರಬಾರದು ಎನ್ನಿಸಿತು ಚೇತನಾಳಿಗೆ. ಮುಂದೆ ಫೋನ್ ಮಾಡುವಾಗಲೆಲ್ಲ, ತನ್ನ ಮಾತುಗಳನ್ನು ಯಾರೋ ಕೇಳುತ್ತಿರುವ ಅತೃಪ್ತ ಭಾವ ಆಕೆಯನ್ನು ಕಾಡುತ್ತಿತ್ತು. ತವರಿಗೆ, ಬಂಧುಗಳಿಗೆ ಫೋನ್ ಮಾಡುವ ಸುಖವೇ ಹೊರಟುಹೋಗಿತ್ತು.

ಇನ್ನೊಮ್ಮೆ ಚೇತನಾಳಿಗೆ ದೋಸ್ತಿ ಮಾಡಿಸಿಕೊಡಬೇಕೆಂದು ಕಸಬಾದಲ್ಲಿ ಕನ್ನಡದ ಕುಟುಂಬಗಳಾವುದಾದರೂ ವಾಸವಿದೆಯೇ ಎಂಬುದಾಗಿ ಅನೇಕರಲ್ಲಿ ವಿಚಾರಿಸಿದ್ದ ಚಂದ್ರಕಾಂತ. ಆದರೆ ಯಾವುದೇ ಲಾಭವಾಗಿರಲಿಲ್ಲ. ಈ ಪ್ರಯತ್ನದಲ್ಲಿ ಅವನಿಗೆ ತನ್ನ ಮನೆಯ ಹತ್ತಿರವೇ